**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ ಉತ್ತರ ಕನ್ನಡ : ಕಾರವಾರ**

**ಸ್ಪೆಷಲ್ ಕೇಸ್ ನಂ. 3/2010**

**ದೋ.ಸಾ. : 76 ಪ್ರಾ.ಸಾ. : 31**

ಸಾಕ್ಷಿಯ ಹೆಸರು : ರಾಮಚಂದ್ರ ಮಾರಿಯಾ ದೊಡಮನಿ
ತಂದೆಯ ಹೆಸರು : ಮಾರಿಯಾ ದೊಡಮನಿ
ವಯಸ್ಸು : 60 ವರ್ಷ
ಉದ್ಯೋಗ : ಕೃಷಿ
ವಾಸ : ಕಾನಗೋಡ ಗ್ರಾಮ.

**ದಿನಾಂಕಃ 27-09-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ವಿಶೇಷ ಸರಕಾರಿ ಅಭಿಯೋಜಕರಿಂದ**

1. ನಾನು ಹುಟ್ಟಿದಾಗಿನಿಂದ ಸಿದ್ದಾಪುರ ತಾಲೂಕಿನ ಕಾನಗೋಡು ಗ್ರಾಮದಲ್ಲಿ ವಾಸ ಇದ್ದೇನೆ. ನ್ಯಾಯಾಲಯದಲ್ಲಿರುವ ಆರೋಪಿ ಊರಿನವರು ಆಗಿದ್ದರಿಂದ ಪರಿಚಯ ನನಗೆ ಇದೆ. ಆರೋಪಿ ನಮ್ಮ ಗ್ರಾಮದಲ್ಲಿ ಹಿಂದೆ ಗ್ರಾಮ ಪಂಚಾಯತಿ ಅಧ್ಯಕ್ಷರು ಆಗಿದ್ದರು ಎಂಬುದು ನನಗೆ ಗೊತ್ತಿಲ್ಲ. 2001-02 ರಲ್ಲಿ ಸ್ವಚ್ಛ ಗ್ರಾಮ ಯೋಜನೆ ಅಡಿಯಲ್ಲಿ ಕಾನಗೋಡು ಗ್ರಾಮ ಪಂಚಾಯತಿಗೆ ರೂ.20 ಲಕ್ಷ್ಯ ಅನ್ನು ಮಂಜೂರು ಮಾಡಿದ್ದರು ಮತ್ತು ಆ ಬಗ್ಗೆ 210 ಫಲಾನುಭವಿಗಳನ್ನು ಗುರುತಿಸಿದ್ದರು ಮತ್ತು ಅದರಲ್ಲಿ ನಾನು ಸಹ ಒಬ್ಬ ಫಲಾನುಭವಿ ಆಗಿದ್ದೆ ಎಂಬುದು ನನಗೆ ಗೊತ್ತಿಲ್ಲ. ಆ ಯೋಜನೆ ಅಡಿಯಲ್ಲಿ ಪ್ರತಿ ಫಲಾನುಭವಿಗಳಿಗೆ ತಲಾ ರೂ.3000/- ಸಹಾಯಧನ ನೀಡಬೇಕಿತ್ತು ಎನ್ನುವುದು ಗೊತ್ತಿಲ್ಲ. ನನಗೆ ಆ ರೀತಿ ಸಹಾಯ ಧನ ನೀಡಿರುವುದಿಲ್ಲ. ನನಗೆ ಶೌಚಾಲಯವನ್ನು ನನ್ನ ಮನೆಗೆ ನಿರ್ಮಾಣ ಮಾಡಿಕೊಟ್ಟಿರುವುದಿಲ್ಲ. ಪೊಲೀಸನವರು ನನ್ನನ್ನು ಈ ಪ್ರಕರಣದ ಬಗ್ಗೆ ವಿಚಾರಣೆ ಮಾಡಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಮಾನ್ಯ ಅಭಿಯೋಜಕರು ಅನುಮತಿಯನ್ನು ಕೇಳುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಗಮನಿಸಿ ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ ವಿಶೇಷ ಸರಕಾರಿ ಅಭಿಯೋಜಕರಿಂದ**

2. ನಾನು ಸಹ ಒಬ್ಬ ಫಲಾನುಭವಿಯಾಗಿ ಆಯ್ಕೆ ಆಗಿದ್ದೆ ಮತ್ತು 210 ಫಲಾನುಭವಿಗಳನ್ನು ನಮ್ಮ ಗ್ರಾಮದಲ್ಲಿ ಸದರಿ ಯೋಜನೆ ಅಡಿಯಲ್ಲಿ ಆಯ್ಕೆ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ನಾನು ಆ ಬಗ್ಗೆ ನಿಪಿ-66 ರಂತೆ ಲೋಕಾಯುಕ್ತ ಆರಕ್ಷಕ ನಿರೀಕ್ಷಕರಿಗೆ ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ನನ್ನ ಊರಿನವನು ಮತ್ತು ನನಗೆ ಪರಿಚಯ ಇದ್ದಾನೆ. ಆದ್ದರಿಂದ ಆರೋಪಿಗೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಜಿ ಟಿ ಎನ್ ರವರಿಂದಃ-</u>**

3. ನನಗೆ ರೂ.3000/- ಅನುದಾನ ಕೊಟ್ಟಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಶೌಚಾಲಯ ನಿರ್ಮಾಣ ಮಾಡಿಕೊಟ್ಟಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ - ಇಲ್ಲ -</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ)

ಓ.ಹೇ.ಕೇ.ಸ.ಇ.

(ಡಿ.ಎಸ್. ವಿಜಯಕುಮಾರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ , ಕಾರವಾರ